# ಜಯ ಹೇ ಕರ್ನಾಟಕ ಮಾತೆ!

ಜೈ ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ!
ಜೈ! ಸುಂದರ ನದಿವನಗಳ ನಾಡೆ,
ಜಯ ಹೇ ರಸ ಋಷಿಗಳ ಬೀಡೆ!

ಭೂದೇವಿಯ ಮಕುಟದ ನವಮಣಿಯೆ,
ಗಂಧದ ಚಂದದ ಹೊನ್ನಿನ ಗಣಿಯೆ;
ರಾಘವ ಮಧುಸೂದನರವತರಿಸಿದ
ಭಾರತ ಜನನಿಯ ತನುಜಾತೆ;
ಜಯ ಹೇ ಕರ್ನಾಟಕ ಮಾತೆ!

ಜನನಿಯ ಜೋಗುಳ ವೇದದ ಘೋಷ
ಜನನಿಗೆ ಜೀವವು ನಿನ್ನಾವೇಶ
ಹಸುರಿನ ಗಿರಿಗಳ ಸಾಲೆ
ನಿನ್ನಯ ಕೊರಳಿನ ಮಾಲೆ.
ಕಪಿಲ ಪತಂಜಲ ಗೌತಮ ಜಿನನುತ
ಭಾರತ ಜನನಿಯ ತನುಜಾತೆ
ಜಯ ಹೇ ಕರ್ನಾಟಕ ಮಾತೆ!

ಶಂಕರ ರಾಮಾನುಜ ವಿದ್ಯಾರಣ್ಯ
ಬಸವೇಶ್ವರ ಮಧ್ವರ ದಿವ್ಯಾರಣ್ಯ
ರನ್ನ ಷಡಕ್ಷರಿ ಪೊನ್ನ
ಪಂಪ ಲಕುಮಿಪತಿ ಜನ್ನ
ಕಬ್ಬಿಗರುದಿಸಿದ ಮಂಗಳಧಾಮ,
ಕವಿ ಕೋಗಿಲೆಗಳ ಪುಣ್ಯಾರಾಮ!
ನಾನಕ ರಾಮಾನಂದ ಕಬೀರರ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ!

ತೈಲಪ ಹೊಯ್ಸಳರಾಳಿದ ನಾಡೆ,
ಡಂಕಣ ಜಕಣರ ನೆಚ್ಚಿನ ಬೀಡೆ;
ಕೃಷ್ಣ ಶರಾವತಿ ತುಂಗಾ
ಕಾವೇರಿಯ ವರ ರಂಗ.
ಚೈತನ್ಯ ಪರಮಹಂಸ ವಿವೇಕರ
ಭಾರತ ಜನನಿಯ ತನುಜಾತೆ
ಜಯ ಹೇ ಕರ್ನಾಟಕ ಮಾತೆ!

ಸರ್ವಜನಾಂಗದ ಶಾಂತಿಯ ತೋಟ,
ರಸಿಕನ ಕಂಗಳ ಸೆಳೆಯುವ ನೋಟ.
ಹಿಂದೂ ಕ್ರೈಸ್ತ ಮುಸಲ್ಮಾನ
ಪಾರಸಿಕ ಜೈನರುದ್ಯಾನ
ಜನಕನ ಹೋಲುವ ದೊರೆಗಳ ಧಾಮ,
ಗಾಯಕ ವೈಣಿಕರಾರಾಮ!
ಕನ್ನಡ ನುಡಿ ಕುಣಿದಾಡುವ ಗೇಹ
ಕನ್ನಡ ತಾಯಿಯ ಮಕ್ಕಳ ದೇಹ!

ಜೈ! ಭಾರತ ಜನನಿಯ ತನುಜಾತೆ!
ಜಯ ಹೇ ಕರ್ನಾಟಕ ಮಾತೆ
ಜೈ! ಸುಂದರ ನದಿವನಗಳ ನಾಡೆ,
ಜಯ ಹೇ ರಸ ಋಷಿಗಳ ಬೀಡೆ!

– ಶ್ರೀ ಕುವೆಂಪು

## ಕನ್ನಡಿಗರ ಹಿರಿಮೆ

ಸಾಧುಗೆ ಸಾಧು ಮಾಧುರ್ಯನ್ಗೆ ಮಾಧುರ್ಯಂ
ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್
ಮಾಧವನೀತನ್ ಪೆರನಲ್ಲ
ಒಳ್ಳಿತ್ತ ಕೆಯ್ವೊರಾರ್ ಪೊಲ್ಲದುಮದರಂತೆ
ಬಲ್ಲಿತ್ತು ಕಲಿಗೆ ವಿಪರೀತಾ ಪುರಾಕೃತ–
ಮಿಲ್ಲಿ ಸಂದಿಕ್ಕುಮದು ಬಂದು
ಕಟ್ಟಿದ ಸಿಂಘಮನ್ ಕೆಟ್ಟೋದೇನೆಮಗೆಂದು
ಬಿಟ್ಟವೊಲ್ ಕಲಿಗೆ ವಿಪರೀತಂಗಹಿತರ್ಕ್ಕಳ್
ಕೆಟ್ಟರ್ ಮೇಣ್ ಸತ್ತರವಿಚಾರಂ

ಸಾಧುಗಳಿಗೆ ಸಾಧು. ಗೆಳೆಯರಿಗೆ ಗೆಳೆಯ; ಆದರೆ ಹಿಂಸೆಪಡಿಸಲೆಂದು ಬಂದವರಿಗೆ ಮಾತ್ರ ಆತ ಸಾಕ್ಷಾತ್ ಮಾಧವನಂತೆ ಭಯಂಕರನಾದವನು. ಒಳಿತನ್ನು ಮಾಡಿದವರಿಗೆ ಒಳಿತನ್ನೂ, ಕೆಟ್ಟುದನ್ನು ಮಾಡಿದವರಿಗೆ ಕೆಟ್ಟುದನ್ನು ಮಾಡುವುದರಲ್ಲಿ ಇವನು ಕಲಿಯುಗ ವಿಪರೀತನೇ ಸರಿ. ಪುರಾಕೃತ ಕರ್ಮವಿದ್ದ ಹಾಗೆ, ಕಟ್ಟಿದ ಸಿಂಹವನ್ನು ಬಿಚ್ಚಿದರೆ ಏನಂತೆ ಎಂಬ ಎಗ್ಗರು ಹಾಗೆ, ಈ ಕಲಿಯುಗ ವಿಪರೀತನನ್ನು ಕಾಲ್ಗೆದರಿ ಕೆಣಕಿದವರು ಕೆಡುತ್ತಾರೆ; ಸತ್ತು ಹೋಗುತ್ತಾರೆ. –ಕನ್ನಡ ಕಲಿ 'ಕಪ್ಪೆ ಅರಭಟ್ಟ'ನನ್ನು ಕುರಿತ ಶಾಸನ ಕಾವ್ಯ (ಕ್ರಿ.ಶ.೭೦೦)

ಪದನರಿದು ನುಡಿಯಲುಂ ನುಡಿ
ದುದನರಿದಾರಯಲುಮಾರ್ಪರಾ ನಾಡವರ್ಗಳ್ ।
ಚದುರರ್ ನಿಜದಿಂ ಕುರಿತೋ
ದದೆಯುಂ ಕಾವ್ಯಪ್ರಯೋಗ ಪರಿಣತ ಮತಿಗಳ್ ॥

ಕನ್ನಡನಾಡಿನ ಜನರು ಹದವರಿತು ಮಾತನಾಡಬಲ್ಲವ ರಾಗಿದ್ದರು. ಇತರರು ಆಡಿದ ಮಾತನ್ನು ಅರ್ಥಮಾಡಿಕೊಂಡು ವಿಮರ್ಶೆ ಮಾಡಬಲ್ಲವರು. ಕಾವ್ಯಗಳನ್ನು ಅಭ್ಯಾಸ ಮಾಡದಿದ್ದರೂ ಕಾವ್ಯ ಪ್ರಯೋಗಗಳಲ್ಲಿ ಪರಿಣತಮತಿಗಳಾದವರು.

– ನೃಪತುಂಗನ (ಕ್ರಿ.ಶ. ೮೧೪–೮೭೭) ಕವಿರಾಜಮಾರ್ಗ